ರಾಜ್ಯದಲ್ಲಿರುವ ಮೃಗಾಲಯಗಳ ನಿರ್ವಹಣೆ

1780 (2242) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಮೃಗಾಲಯಗಳು ಎಲ್ಲೆಲ್ಲಿ ಇರುತ್ತವೆ.

ಆ) ರಾಜ್ಯದಲ್ಲಿ ಎಷ್ಟು ಮೃಗಾಲಯದ ವೆಚ್ಚ ಹಾಗೂ ಆದಾಯ ಎಷ್ಟು; (ಪ್ರತ್ಯೇಕ ವಿವರ ನೂಡುವುದು)

ಇ) ಮೃಗಾಲಯಗಳಿಂದ ಸಾಕಷ್ಟು ಆದಾಯ ಬರುತ್ತಿದ್ದರೂ ನಿರ್ಲಕ್ಷತನದಿಂದಾಗಿ ಮೈಸೂರು ಮೃಗಾಲಯದಲ್ಲಿ ಮೃಗಗಳು ಸಾಯುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಈ ಮೃಗಾಲಯಗಳನ್ನು ಉತ್ತಮ ರೀತಿಯಿಂದ ನಿರ್ವಹಿಸಲು ಯಾವ ವಿಶೇಷ ಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ?

ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಜೀವಿಶಾಸ್ತ್ರ ಸಚಿವರು)

ಅ) ರಾಜ್ಯದಲ್ಲಿ 22 ಮೃಗಾಲಯಗಳು ಇವೆ (ಪಟ್ಟಿ ಲಗತ್ತಿಸಿದೆ)

ಆ) ಕರ್ನಾಟಕ ಮೃಗಾಲಯ ಪ್ರಾಧಿಕಾರ ವ್ಯಾಪ್ತಿಯಲ್ಲಿರುವ ಮೃಗಾಲಯಗಳ 2001-02ನೇ ಸಾಲಿನ ಆದಾಯ ವೆಚ್ಚ ಈ ಕೆಳಕಂಡಂತೆ ಇರುತ್ತದೆ.

ರೂ. ಲಕ್ಷಗಳಲ್ಲಿ

	ಮೃಗಾಲಯದ ಹೆಸರು	ಆದಾಯ	ವೆಚ್ಚ
1.	ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು	202.00	306.18
2.	ಬನ್ನೇರುಘಟ್ಟ ಬಯಾಲಾಜಿಕಲ್ ಉದ್ಯಾನವನ, ಬೆಂಗಳೂರು	127.00	102.01
3.	ಮಕ್ಕಳ ಉದ್ಯಾನವನ ಮತ್ತು ಮಿನಿ ಮೃಗಾಲಯ, ಬಳ್ಳಾರಿ	1.89	8.03
4.	ಮಕ್ಕಳ ಉದ್ಯಾನವನ ಮತ್ತು ಮಿನಿ ಮೃಗಾಲಯ, ಬಳ್ಳಾರಿ	1.75	2.51
5.	ಇಂದಿರ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ, ದಾವಣಗೆರೆ	0.87	2.20
6.	ಕಿತ್ತೂರು ರಾಣಿ ಚೆನ್ನಮ್ಮ ನಿಸರ್ಗಧಾಮ ಮಿನಿ ಮೃಗಾಲಯ, ಭೂತರಾಮನಹಟ್ಟಿ ಬೆಳಗಾವಿ		5.98
7.	ಮಕ್ಕಳ ಉದ್ಯಾನವನ ಮತ್ತು ಮಿನಿ ಮೃಗಾಲಯ, ಬಂಕದಕಟ್ಟೆ, ಗದಗ್	1.16	16.99

	ಮೃಗಾಲಯದ ಹೆಸರು	ಆದಾಯ	ವೆಚ್ಚ
8.	ಹುಲಿ ಮತ್ತು ಸಿಂಹಧಾಮ, ತ್ಯಾವರೆಕೊಪ್ಪ, ಶಿವಮೊಗ್ಗ	12.57	37.55

೫) ಮೈಸೂರು ಮೃಗಾಲಯದಲ್ಲಿ ಮೃಗಗಳು ನಿರ್ಲಕ್ಷ್ಯದಿಂದ ಸತ್ತಿರುವುದಿಲ್ಲ. 2002 -03ನೇ ವರ್ಷದಲ್ಲಿ 16-03-2003 ರವರೆಗೆ 5 ಪ್ರಾಣಿಗಳು ಅಸಹಜ ಸಂಶಯಾಸ್ಪದವಾದ ರೀತಿಯಲ್ಲಿ ಸಾವನ್ನಪ್ಪಿರುತ್ತವೆ. ಇದರ ಕುರಿತು ಪೋಲೀಸ್ ಇಲಾಖೆ ದೂರು ನೀಡಲಾಗಿದೆ ಹಾಗೂ ಇಲಾಖಾ ವಿಚಾರಣೆ ನಡೆಯುತ್ತಲಿದೆ.

1. ಕರ್ನಾಟಕ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಯನ್ನು ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು, ಇದರ ಜೊತೆಗೆ ಇತರ ಅಂಗೀಕೃತ 7 ಮೃಗಾಲಯಗಳಿಗೆ (ಅನುಬಂಧ -1) ಕ್ರಮ ಸಂಖ್ಯೆ:2 ರಿಂದ 8) ದಿನಾಂಕ 20.07.2002 ರಿಂದ ವಿಸ್ತರಿಸಿದೆ. ಇದರಿಂದಾಗಿ ಬಂಧಿತ ವನ್ಯಪ್ರಾಣಿಗಳ ಕೇಂದ್ರೀಕೃತಗೊಂಡ ನಿರ್ವಹಣೆ ಮತ್ತು ಮೃಗಾಲಯಗಳ ಅಭಿವೃದ್ಧಿಯನ್ನು ನವೀನ ವೈಜ್ಞಾನಿಕ ತತ್ವದ ಮೇಲೆ ಕೈಗೊಳ್ಳಲು ಸಹಕಾರಿಯಾಗಿದೆ.
2. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಆಡಳಿತ ಮಂಡಳಿಯನ್ನು ನವೀಕರಿಸಲಾಗಿದೆ. ಸರ್ಕಾರಿ ಅಧಿಕಾರಿಗಳಲ್ಲದೆ, ಪ್ರಾಣಿ ಕ್ಷೇತ್ರಗಳ ತಜ್ಞರು ಮತ್ತು 3 ಜನ ನಾಮಕರಣಗೊಂಡ ಸರ್ಕಾರೇತರ ಸದಸ್ಯರುಗಳ ಅನುಭವಗಳನ್ನು ಪಡೆಯಲಾಗುತ್ತಿದೆ.
3. ಬಂಧಿತ ವನ್ಯಪ್ರಾಣಿಗಳನ್ನು ಇಟ್ಟಿರುವ ಜಾಗಗಳನ್ನು ನವೀಕರಣಗೊಳಿಸಿ ಆ ಪ್ರಾಣಿಗಳು ತಮ್ಮ ತಮ್ಮ ಜಾಗಗಳಲ್ಲಿ ಓಡಾಡಲು ವಿಶಾಲವಾದ ಜಾಗ ಕಲ್ಪಿಸಲಾಗಿದೆ. ಉದಾ: ಮೈಸೂರು ಮೃಗಾಲಯದಲ್ಲಿ ನೀಲಗಿರಿ ಲಂಗೂರ್‌ಗಳಿಗೆ ಮೋಟೆಡ್ ಎನ್‌ಕ್ಲೋಸರ್ ನಿರ್ಮಿಸಲಾಗಿದೆ.
4. ಬೆಂಗಳೂರಿನ ಬನ್ನೇರುಘಟ್ಟ ಬಯಾಲಾಜಿಕಲ್ ಉದ್ಯಾವನದಲ್ಲಿ ಈಗಿರುವ ಸಿಂಹ ಮತ್ತು ಹುಲಿ ಸಫಾರಿ ಜೊತೆಗೆ, ಸಸ್ಯಾಹಾರಿ ಪ್ರಾಣಿಗಳ ಮತ್ತು ಕರಡಿ ಸಫಾರಿಗಳನ್ನು ನಿರ್ಮಿಸಲಾಗಿದೆ.
5. ಶಿವಮೊಗ್ಗ ತ್ಯಾವರೆಕೊಪ್ಪದಲ್ಲಿರುವ ಹುಲಿ, ಸಿಂಹ ಮತ್ತು ಸಸ್ಯಾಹಾರಿ ಪ್ರಾಣಿಗಳ ಸಫಾರಿಗಳನ್ನು ಭಾರತ ಸರ್ಕಾರ ನಿಗಧಿಪಡಿಸಿದ ಪ್ರಮಾಣದಂತೆ ವಿಸ್ತರಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.
6. ಬಳ್ಳಾರಿ ಮತ್ತು ಗುಲ್ಬರ್ಗ ಮೃಗಾಲಯಗಳನ್ನು ಹಾಲಿ ಸ್ಥಳಗಳಲ್ಲಿ ಅಭಿವೃದ್ಧಿಪಡಿಸಲು ಸಾಧ್ಯವಿಲ್ಲದ್ದರಿಂದ ಅವುಗಳನ್ನು ಬೇರೆ ಉತ್ತಮ ಸ್ಥಳಕ್ಕೆ ಸ್ಥಳಾಂತರಗೊಳಿಸಲು ಪ್ರಸ್ತಾವನೆ ಇದೆ.
7. ಬೆಂಗಳೂರಿನ ಬನ್ನೇರುಘಟ್ಟ ಬಯಾಲಾಜಿಕಲ್ ಉದ್ಯಾನವನದಲ್ಲಿ, ಪ್ರಾಣಿಗಳಿಗಾಗಿ ಹೊಸ ಆಸ್ಪತ್ರೆ ನಿರ್ಮಿಸಲಾಗಿದ್ದು ಇದರಿಂದಾಗಿ ಪ್ರಾಣಿಗಳಿಗೆ ಉತ್ತಮ ವೈದ್ಯಕೀಯ ಪಾಲನೆ ಸಿಗುವಂತಾಗಿದೆ.
8. ಇನ್ಸ್‌ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಮತ್ತು ವೆಟರ್ನರಿ ಬಯಾಲಾಜಿಕಲ್ಸ್ ಹೆಬ್ಬಾಳ, ಇವರ ಒಂದು ಪ್ರಯೋಗ ಶಾಲೆಯನ್ನು ಬನ್ನೇರುಘಟ್ಟ ಬಯಾಲಾಜಿಕಲ್

ಉದ್ಯಾನವನದಲ್ಲಿ ತೆರೆಯಲಾಗಿದ್ದು, ಅದು ಬಂಧಿತ ವನ್ಯ ಮೃಗಗಳ ಆರೋಗ್ಯದ ಬಗ್ಗೆ ಕ್ರಮಬದ್ಧವಾಗಿ ಕಾಲಾನುಕಾಲಕ್ಕೆ ಗಮನ ನೀಡುತ್ತಿದೆ.

9. ನೌಕರರಿಗೆ ಅವರ ನಿಪುಣತೆಯನ್ನು ಹೆಚ್ಚಿಸಲು ನಿಯತವಾಗಿ ತರಬೇತಿ ಕೊಡಲಾಗುತ್ತಿದೆ.

ಅನುಬಂಧ - 1

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೌಜಲಗಿ ಮಹಾಂತೇಶ್ (ಬೈಲಹೊಂಗಲ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2242ರ ಉತ್ತರಕ್ಕೆ ಅನುಬಂಧ ಕರ್ನಾಟಕ ರಾಜ್ಯದ ಮೃಗಾಲಯಗಳ ಪಟ್ಟಿ

1. ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು
2. ಬನ್ನೇರುಘಟ್ಟ ಬಯಾಲಜಿಕಲ್ ಉದ್ಯಾನವನ, ಬೆಂಗಳೂರು
3. ಮಕ್ಕಳ ಉದ್ಯಾನವನ ಮತ್ತು ಮಿನಿ ಮೃಗಾಲಯ, ಬಳ್ಳಾರಿ
4. ಮಕ್ಕಳ ಉದ್ಯಾನವನ ಮತ್ತು ಮಿನಿ ಮೃಗಾಲಯ, ಗುಲಬರ್ಗ

ಕರ್ನಾಟಕ ಮೃಗಾಲಯ ಪ್ರಾಧಿಕಾರ ವ್ಯಾಪ್ತಿಯಲ್ಲಿ ಮೃಗಾಲಯಗಳು

5. ಇಂದಿರ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ, ದಾವಣಗೆರೆ
6. ಕಿತ್ತೂರು ರಾಣಿ ಚೆನ್ನಮ್ಮ ನಿಸರ್ಗಧಾಮ ಮಿನಿ ಮೃಗಾಲಯ, ಭೂತರಾಮನಹಟ್ಟಿ, ಬೆಳಗಾವಿ
7. ಮಕ್ಕಳ ಉದ್ಯಾನವನ ಮತ್ತು ಮಿನಿ ಮೃಗಾಲಯ, ಬಿಂಕದಕಟ್ಟೆ, ಗದಗ್
8. ಹುಲಿ ಮತ್ತು ಸಿಂಹಧಾಮ, ತ್ಯಾವರೆಕೊಪ್ಪ ಶಿವಮೊಗ್ಗ
9. ಇಂಡವಾಳ್ ನೇಚರ್ ಪಾರ್ಕ್ ಮತ್ತು ಮಿನಿ ಜೂ ಮಂಡ್ಯ
10. ಡೀರ್ ಪಾರ್ಕ್, ಶ್ರೀ ಕ್ಷೇತ್ರ ಸೋಗಲ್, ಸೌಂಧತ್ತಿ
11. ಚಿಲ್ಡ್ರನ್ಸ್ ಪಾರ್ಕ್, ಸಿರಸಿ, ವಿಭಾಗ, ಸಿರಸಿ
12. ಚಿಲ್ಡ್ರನ್ಸ್ ಜೂ, ಧಾರವಾಡ
13. ನೇಚರ್ ಪಾರ್ಕ್, ರಾಯಚೂರು

ಕೇಂದ್ರ ಮೃಗಾಲಯ ಪ್ರಾಧಿಕಾರವು ಮಾನ್ಯತೆ ನೀಡಿರುವುದಿಲ್ಲ

14. ಡೀರ್ ಪಾರ್ಕ್, ಹಳಿಯಾಳ್ ಟೌನ್, ಉತ್ತರ ಕನ್ನಡ
15. ಅಂತರಗಂಗೆ ಚಿಲ್ಡ್ರನ್ಸ್ ಪಾರ್ಕ್, ಕೋಲಾರ
16. ಮಿನಿ ಜೂ ಮಿನಕನಗುರ್ಕಿ, ಕೋಲಾರ

ಆದ್ದರಿಂದ ಈ ಮೃಗಾಲಯಗಳನ್ನು ಮುಚ್ಚಲು ಆದೇಶಿಸಲಾಗಿದೆ.

17. ಸೊರ್ಕಾಯನಹಳ್ಳಿ, ಚಿಲ್ಡ್ರನ್ಸ್ ಮತ್ತು ಡೀರ್ ಪಾರ್ಕ್, ಕೋಲಾರ
18. ಕೆಂಪೆಗೌಡ ವನಧಾಮ ಸಾವನದುರ್ಗ, ಮಾಗಡಿ ತಾಲ್ಲೂಕು, ಬೆಂಗಳೂರು
19. ಕೆಂಪಾಬುದಿ ಡೀರ್ ಪಾರ್ಕ್, ಬೆಂಗಳೂರು
20. ಪಿಲಿಕುಳ ನಿಸರ್ಗಧಾಮ, ಮಂಗಳೂರು
21. ಕೈವಾರ ತಪೋವನ, ಚಿಂತಾಮಣಿ, ಕೋಲಾರ — ವಿವಿಧ ಸಂಘ ಸಂಸ್ಥೆಗಳು
22. ಡೀರ್ ಪಾರ್ಕ್-ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿ., ದೋಣಿಮಲೈ ಬಳ್ಳಾರಿ — ನಡೆಸುತ್ತಿರುವ ಮೃಗಾಲಯಗಳು

FEE FWL 2003

ರಾಜ್ಯ ಹೆದ್ದಾರಿಗಳ ನಿರ್ವಹಣೆ

1781 (2243) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಎಷ್ಟು ಕಿಮೀ. ರಾಜ್ಯ ಹೆದ್ದಾರಿ ಇದೆ; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ರಸ್ತೆಗಳ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸಿಕೊಟ್ಟಿರುವ ಸಂಗತಿ ನಿಜವೆ; ಹಾಗಿದ್ದಲ್ಲಿ, ಯಾವ ಕರಾರಿನ ಮೇಲೆ ಹಾಗೂ ಎಷ್ಟು ಕಿಮೀ. ರಸ್ತೆಯನ್ನು ನಿರ್ವಹಣೆಗೆ ವಹಿಸಿಕೊಡಲಾಗಿದೆ;

ಇ) ಈ ರಸ್ತೆಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿಯ ಒಟ್ಟು ಉದ್ದ 9829 ಕಿಮೀ. (ಜಿಲ್ಲಾವಾರು ವಿವರ ಲಗತ್ತಿಸಲಾಗಿದೆ.

ಆ) ಹೌದು.

ರಾಜ್ಯ ಹೆದ್ದಾರಿಗಳ ಮೂರು ವರ್ಷ ನಿರ್ವಹಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಮತಿಯಿಂದ ತೆಗೆದುಕೊಳ್ಳಲಾಗಿದ್ದು, ಇದನ್ನು ಜಿಲ್ಲಾವಾರು ಆಧಾರದ ಮೇಲೆ ಮೂರು ವರ್ಷದ ನಿರ್ವಹಣೆಗಾಗಿ ಲೋಕೋಪಯೋಗಿ ವಿಭಾಗಾವಾರು ಟೆಂಡರ್ ಕರೆದು ಕೆಳಕಂಡ ಕರಾರಿನ ಮೇಲೆ ಗುತ್ತಿಗೆಯನ್ನು ನೀಡಲಾಗಿದೆ.

1. ಗುತ್ತಿಗೆದಾರರು ಮೊದಲನೇ ವರ್ಷದಲ್ಲಿ ನಿರ್ವಹಿಸಿದ ಕಾಮಗಾರಿಗಳನ್ನು ಎರಡನೇ ಮತ್ತು ಮೂರನೇ ವರ್ಷದಲ್ಲಿ ನಿರ್ವಹಿಸುವುದು.

2. ಗುತ್ತಿಗೆದಾರರು ಹಾಟ್ ಮಿಕ್ಸ್ ಪ್ಲಾಂಟ್, ಪೇವರ್, ರೋಡ್ ರೋಲರ್, ಟಿಪ್ಪರ್ ಮುಂತಾದ ಯಂತ್ರಗಳನ್ನು ಹೊಂದಿರಬೇಕು.